# ಐಬಿಎಂ ಸ್ಕಿಲ್ ಬಿಲ್ಡ್‌ನೊಂದಿಗೆ ವಿಡಿಐಟಿ ಒಡಂಬಡಿಕೆ



ಹಳಿಯಾಳ, ಸ್ಥಳೀಯ ಕೆ ಎಲ್ ಎಸ್ ವಿ ಡಿ ಐ ಟಿ ಎಂಜೀನಿಯರಿಂಗ್ ಕಾಲೇಜಿನಲ್ಲಿ ಎ ಐ ಸಿ ಟಿ ಇ ಪ್ರಾಯೋಜಕತ್ವದಲ್ಲಿ ಮಂಗಳವಾರ ಆರಂಭಗೊಂಡ ಐದು ದಿನಗಳ

ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಾಗಾರದಲ್ಲಿ ಐ ಬಿ ಎಂ ಸ್ಕಿಲ್ ಬಿಲ್ಡ್ ಮತ್ತು ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಶನ್ ಜೊತೆಗೆ ನೂತನ ತಂತ್ರಜ್ಞಾನ ತರಬೇತಿ ಬಗ್ಗೆ ಕಾಲೇಜು ಪರಿಸ್ಪರ್ ಒಡಂಬಡಿಕೆ ಮಾಡಿಕೊಂಡಿತು.

ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಮತ್ತು ಐ ಬಿ ಎಂ ಸ್ಕಿಲ್ ಬಿಲ್ಡ್‌ನ ಪದಾಧಿಕಾರಿ ರಮೇಶ ಜಾಧವ್ ಒಡಂಬಡಿಕೆ ಪತ್ರವನ್ನು ಪರಸ್ಪರ್ ವಿನಿಮಯ ಮಾಡಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ರಮೇಶ್ ಜಾದವ್ ತಮ್ಮ ಸಂಸ್ಥೆಯು ಸ್ಕಿಲ್ಸ್ ಫಾರ್ ಯು ಕಾರ್ಯಕ್ರಮದಡಿಯಲ್ಲಿ ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ, ಸೈಬರ್ ಸುರಕ್ಷತೆ,

ಕ್ಲೌಡ್ ಕಂಪ್ಯೂಟಿರಿಂಗ್ ಮುಂತಾದ ನೂತನ ತಂತ್ರಜ್ಞಾನಗಳ ಕುರಿತಾಗಿ ತರಬೇತಿ ನೀಡುವುದು ಜೊತೆಗೆ ವೃತ್ತಿಪರ ಕೌಶಲ್ಯದ ಅಭಿವೃದ್ಧಿ ಬಗ್ಗೆ ಮಾಹಿತಿ ನೀಡುವದು ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಮಾತನಾಡಿ, ಐ ಬಿ ಎಂ ಸ್ಕಿಲ್ ಬಿಲ್ಡ್ ನೊಂದಿಗೆ ಮಾಡಿಕೊಂಡ ಮಹತ್ವಪೂರ್ಣ ಒಡಂಬಡಿಕೆಯಿಂದ ವಿದ್ಯಾರ್ಥಿಗಳ ಕೌಶಲ್ಯ ಅಭಿವೃದ್ಧಿಗೆ ತುಂಬಾ ಸಹಕಾರಿಯಾಗಲಿದೆ ಎಂದರು.

ಈ ಸಂದರ್ಭದಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ವೆಂಕಟೇಶ ಶಂಕರ್, ಕಂಪ್ಯೂಟರ್ ಸೈನ್ಸ್ (ಎ ಐ ಎಂ ಎಲ್ ) ಮುಖ್ಯಸ್ಥೆ ಡಾ. ಪೂರ್ಣಿಮಾ ರಾಯ್ಕರ್,

ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ನಾಗರಾಜ ಭಟ್ ಇದ್ದರು. ಕಾರ್ಯಕ್ರಮದಲ್ಲಿ 200 ಕ್ಕೂ ಅಧಿಕ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದ್ದಾರೆ.

October 29, 2025

# ಐ ಬಿ ಎಂ ಸ್ಕಿಲ್ ಬಿಲ್ಡ್ ನೊಂದಿಗೆ ವಿ ಡಿ ಐ ಟಿ ಒಡಂಬಡಿಕೆ

**»ಜನಮಾಧ್ಯಮ, ಹಳಿಯಾಳ:** ಕೆ ಎಲ್ ಎಸ್ ವಿ ಡಿ ಐ ಟಿ ಹಳಿಯಾಳವು ಐ ಬಿ ಎಂ ಸ್ಕಿಲ್ ಬಿಲ್ಡ್ ಮತ್ತು ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಶನ್ ಜೊತೆಗೆ ಅಕ್ಟೋ. 27ರಂದು ಒಡಂಬಡಿಕೆ ಮಾಡಿಕೊಂಡಿತು. ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಮತ್ತು ಐ ಬಿ ಎಂ ಸ್ಕಿಲ್ ಬಿಲ್ಡ್ ನ ಪದಾಧಿಕಾರಿ ರಮೇಶ ಜಾಧವ್ ಒಡಂಬಡಿಕೆ ಪತ್ರವನ್ನು ವಿನಿಮಯ ಮಾಡಿಕೊಂಡರು. ಈ ಸಂದರ್ಭದಲ್ಲಿ ಮಾತನಾಡಿದ ರಮೇಶ್ ಜಾದವ್ ತಮ್ಮ ಸಂಸ್ಥೆಯು ಸ್ಕಿಲ್ಸ್ ಫಾರ್ ಯು ಕಾರ್ಯಕ್ರಮದ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ, ಸೈಬರ್ ಸುರಕ್ಷತೆ, ಕ್ಲೌಡ್



ಕಂಪ್ಯೂಟಿಂಗ್ ಮುಂತಾದ ನೂತನ ತಂತ್ರಜ್ಞಾನಗಳ ಕುರಿತಾಗಿ ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದು ಎಂದು ಹೇಳಿದರು. ಅಷ್ಟೇ ಅಲ್ಲದೆ ವೃತ್ತಿಪರ ಕೌಶಲ್ಯದ ಅಭಿವೃದ್ಧಿಗೂ ತರಬೇತಿ ನೀಡುವುದಾಗಿ ಹೇಳಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ. ವಿ ಎ ಕುಲಕರ್ಣಿ ಐ ಬಿ ಎಂ ಸ್ಕಿಲ್ ಬಿಲ್ಡ್ ನೊಂದಿಗೆ ಒಡಂಬಡಿಕೆ ವಿದ್ಯಾರ್ಥಿಗಳ ಕೌಶಲ್ಯ ಅಭಿವೃದ್ಧಿಗೆ ಸಹಕಾರಿಯಾಗುವುದೆಂದು ಹೇಳಿದರು.

ಈ ಸಂದರ್ಭದಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ವೆಂಕಟೇಶ ಶಂಕರ್, ಕಂಪ್ಯೂಟರ್ ಸೈನ್ಸ್ (ಎ ಐ ಎಂ ಎಲ್ ) ಮುಖ್ಯಸ್ಥೆ ಡಾ. ಪೂರ್ಣಿಮಾ ರಾಯ್ಕರ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ನಾಗರಾಜ ಭಟ್ ವೇದಿಕೆ ಮೇಲೆ ಉಪಸ್ಥಿತರಿದ್ದರು. ಎ ಐ ಸಿ ಟಿ ಇ ಪ್ರಾಯೋಜಕತ್ವದಲ್ಲಿ ಆಯೋಜಿಸಿರುವ 5 ದಿನಗಳ ವಿದ್ಯಾರ್ಥಿ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದಲ್ಲಿ 200ಕ್ಕೂ ಅಧಿಕ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದ್ದಾರೆ.

# ಐಬಿಎಂ ಸ್ಕಿಲ್ ಬಿಲ್ಡ್ ಜೊತೆಗೆ ಹಳಿಯಾಳದ ವಿಡಿಐಟಿ ಒಡಂಬಡಿಕೆ

● **ತತ್ತ್ವನಿಷ್ಠ, ಹಳಿಯಾಳ:** ಕೆಎಲ್‌ಎಸ್ ವಿ.ಡಿ.ಐ.ಟಿ. ಇಂಜಿನಿಯರಿಂಗ್ ಕಾಲೇಜು ಐಬಿಎಂ ಸ್ಕಿಲ್ ಬಿಲ್ಡ್ ಹಾಗೂ ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಶನ್ ಜೊತೆ ಅಧಿಕೃತವಾಗಿ ಒಡಂಬಡಿಕೆ ಮಾಡಿಕೊಂಡಿದೆ.

ಈ ಒಡಂಬಡಿಕೆಗೆ ಪ್ರಾಚಾರ್ಯ ಡಾ. ವಿ. ಎ. ಕುಲಕರ್ಣಿ ಹಾಗೂ ಐಬಿಎಂ ಸ್ಕಿಲ್ ಬಿಲ್ಡ್‌ನ ಪದಾಧಿಕಾರಿ ರಮೇಶ್ ಜಾಧವ್ ಸಹಿ ಹಾಕಿದರು.

ಈ ಸಂದರ್ಭದಲ್ಲಿ ಮಾತನಾಡಿದ ರಮೇಶ್ ಜಾಧವ್, "ಸ್ಕಿಲ್ಸ್ ಫಾರ್ ಯು ಕಾರ್ಯಕ್ರಮದ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ, ಸೈಬರ್ ಸುರಕ್ಷತೆ, ಕ್ಲೌಡ್ ಕಂಪ್ಯೂಟಿಂಗ್ ಮುಂತಾದ ನೂತನ ತಂತ್ರಜ್ಞಾನಗಳ ತರಬೇತಿ ನೀಡಲಾಗುವುದು," ಎಂದು ಹೇಳಿದರು. ಜೊತೆಗೆ, ವೃತ್ತಿಪರ ಕೌಶಲ್ಯ ಮತ್ತು ಉದ್ಯೋಗಾರ್ಹತೆ



ಅಭಿವೃದ್ಧಿಗೆ ಸಹ ಪ್ರಾಮುಖ್ಯತೆ ನೀಡುವುದಾಗಿ ತಿಳಿಸಿದ್ದಾರೆ.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ. ಎ. ಕುಲಕರ್ಣಿ, "ಐಬಿಎಂ ಸ್ಕಿಲ್ ಬಿಲ್ಡ್‌ನೊಂದಿಗೆ ಈ ಒಡಂಬಡಿಕೆ ವಿದ್ಯಾರ್ಥಿಗಳ ತಾಂತ್ರಿಕ ಮತ್ತು ವೃತ್ತಿಪರ ಕೌಶಲ್ಯ ವೃದ್ಧಿಗೆ ಹೊಸ ಅವಕಾಶಗಳನ್ನು ತೆರೆದಿಡಲಿದೆ" ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ವೆಂಕಟೇಶ ಶಂಕರ್, ಕಂಪ್ಯೂಟರ್ ಸೈನ್ಸ್ (AI & ML) ವಿಭಾಗದ ಮುಖ್ಯಸ್ಥೆ ಡಾ. ಪೂರ್ಣಿಮಾ ರಾಯ್ಕರ್ ಹಾಗೂ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ನಾಗರಾಜ ಭಟ್ ಉಪಸ್ಥಿತರಿದ್ದರು.

ಎಐಸಿಟಿಇ (AICTE) ಪ್ರಾಯೋಜಕತ್ವದಲ್ಲಿ ನಡೆಯುತ್ತಿರುವ ಐದು ದಿನಗಳ ವಿದ್ಯಾರ್ಥಿ ಕೌಶಲ್ಯ ಅಭಿವೃದ್ಧಿ ಶಿಬಿರದಲ್ಲಿ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದ್ದಾರೆ.

# ಐಬಿಎಂ ಸ್ಕಿಲ್ ಬಿಲ್ಡ್‌ನೊಂದಿಗೆ ವಿಡಿಐಟಿ ಒಡಂಬಡಿಕೆ



**ಶಿರಸಿ ಸಮಾಚಾರ ⏭ ಹಳಿಯಾಳ:** ಕೆಎಲ್‌ಎಸ್ ವಿಡಿಐಟಿ ಹಳಿಯಾಳವು ಐಬಿಎಂ ಸ್ಕಿಲ್ ಬಿಲ್ಡ್ ಮತ್ತು ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಶನ್ ಜೊತೆಗೆ ಅಕ್ಟೋಬರ್ 27ರಂದು ಒಡಂಬಡಿಕೆ ಮಾಡಿಕೊಂಡಿತು. ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಮತ್ತು ಐ ಬಿ ಎಂ ಸ್ಕಿಲ್ ಬಿಲ್ಡ್ ನ ಪದಾಧಿಕಾರಿ ರಮೇಶ ಜಾಧವ್ ಒಡಂಬಡಿಕೆ ಪತ್ರವನ್ನು ವಿನಿಮಯ ಮಾಡಿಕೊಂಡರು. ಈ ಸಂದರ್ಭದಲ್ಲಿ ಮಾತನಾಡಿದ ರಮೇಶ್ ಜಾದವ್ ತಮ್ಮ ಸಂಸ್ಥೆಯು ಸ್ಕಿಲ್ಸ್ ಫಾರ್ ಯು ಕಾರ್ಯಕ್ರಮದ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ, ಸೈಬರ್ ಸುರಕ್ಷತೆ, ಕ್ಲೌಡ್ ಕಂಪ್ಯೂಟಿಂಗ್ ಮುಂತಾದ ನೂತನ ತಂತ್ರಜ್ಞಾನಗಳ ಕುರಿತಾಗಿ ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದು ಎಂದು ಹೇಳಿದರು. ಅಷ್ಟೇ ಅಲ್ಲದೆ ವೃತ್ತಿಪರ ಕೌಶಲ್ಯದ ಅಭಿವೃದ್ಧಿಗೂ ತರಬೇತಿ ನೀಡುವುದಾಗಿ ಹೇಳಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ. ವಿ ಎ ಕುಲಕರ್ಣಿ ಐ ಬಿ ಎಂ ಸ್ಕಿಲ್ ಬಿಲ್ಡ್ ನೊಂದಿಗೆ ಒಡಂಬಡಿಕೆ ವಿದ್ಯಾರ್ಥಿಗಳ ಕೌಶಲ್ಯ ಅಭಿವೃದ್ಧಿಗೆ ಸಹಕಾರಿಯಾಗುವುದೆಂದು ಹೇಳಿದರು.

ಈ ಸಂದರ್ಭದಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ವೆಂಕಟೇಶ ಶಂಕರ್, ಕಂಪ್ಯೂಟರ್ ಸೈನ್ಸ್ (ಎಐಎಂಎಲ್) ಮುಖ್ಯಸ್ಥೆ ಡಾ. ಪೂರ್ಣಿಮಾ ರಾಯ್ಕರ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ.ನಾಗರಾಜ ಭಟ್ ವೇದಿಕೆ ಮೇಲೆ ಉಪಸ್ಥಿತರಿದ್ದರು. ಎ ಐ ಸಿ ಟಿ ಇ ಪ್ರಾಯೋಜಕತ್ವದಲ್ಲಿ ಆಯೋಜಿಸಿರುವ 5 ದಿನಗಳ ವಿದ್ಯಾರ್ಥಿ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದಲ್ಲಿ 200ಕ್ಕೂ ಅಧಿಕ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದ್ದಾರೆ.